ದಿನಾಂಕ: 13-04-2010ರಂದು ಅಪರಾಹ್ನ: 03-00ಗಂಟೆಗೆ ಉಪಾಧ್ಯಕ್ಷರ ಕೊಠಡಿ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷರು: ಶ್ರೀ ಎ.ಇ. ಚಂದ್ರಶೇಖರ್ ಉ: ಅಣತಿ ಶೇಖರಣ್ಣ

ಸಾಮಾನ್ಯ ಸ್ಥಾಯಿ ಸಮಿತಿ

ಜಿಲ್ಲಾ ಪಂಚಾಯಿತಿ, ಹಾಸನ.

ಹಾಜರಿ-06

ಗೈರು ಹಾಜರಿ:1

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಯೋಜನಾಧಿಕಾರಿಯವರು ಸಭೆಗೆ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ದ್ಯಾಪಲಾಪುರ ಗ್ರಾಮದ ನವಗ್ರಾಮಕ್ಕೆ ಬಾಕಿ ಉಳಿದಿರುವ 11 ಮನೆಗಳಿಗೆ ರೂ.54.84 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(1)198/2004-05 ದಿನಾಂಕ: 24-02-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ದ್ಯಾಪಲಾಪುರ ಗ್ರಾಮದಲ್ಲಿ ನವಗ್ರಾಮದಡಿ ಒಟ್ಟು 89 ಮನೆಗಳು ಅನುಮೋದನೆಗೊಂಡಿದ್ದು, ಈ ಪೈಕಿ 78 ಮನೆಗಳು ಪೂರ್ಣಗೊಂಡಿರುತ್ತದೆ. ಉಳಿದ 11 ಮನೆಗಳನ್ನು ನಿರ್ಮಿಸಲು ರೂ.54.84 ಲಕ್ಷಗಳು ಅವಶ್ಯಕವಾಗಿದ್ದು, ಇದನ್ನು ಬಿಡುಗಡೆ ಮಾಡುವಂತೆ ಕೋರಿ ವಸತಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ವಸತಿ ಇಲಾಖೆಯ ಪತ್ರಗಳಲ್ಲಿ ನವಗ್ರಾಮ ಯೋಜನೆಯನ್ನು ಈಗ ರಾಜೀವ್ ಗಾಂಧಿ ಗ್ರಾಮೀಣ ನಿಗಮವು ಅನುಷ್ಠಾನಗೊಳಿಸುತ್ತಿಲ್ಲವಾದ ಕಾರಣ, ಬಾಕಿ ಉಳಿದ 11 ಮನೆಗಳ ನಿರ್ಮಾಣಕ್ಕೆ ಅಗತ್ಯವಾದ ರೂ.54.84ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯಿತಿಯಿಂದಲೇ ಭರಿಸುವಂತೆ ತಿಳಿಸಿರುತ್ತಾರೆ. ಆದರೆ, ಜಿಲ್ಲಾ ಪಂಚಾಯತ್‌ನಲ್ಲಿ ಈ ಉದ್ದೇಶಕ್ಕಾಗಿ ಅನುದಾನ ಲಭ್ಯವಿರುವುದಿಲ್ಲ. ಅನುದಾನ ನೀಡುವ ಬಗ್ಗೆ ವಿಷಯವನ್ನು ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ದ್ಯಾಪಲಾಪುರ ಗ್ರಾಮದಲ್ಲಿ ನವಗ್ರಾಮದಡಿ ಒಟ್ಟು 89 ಮನೆಗಳ ಪೈಕಿ 78 ಮನೆಗಳು ಪೂರ್ಣಗೊಂಡಿದ್ದು, ಉಳಿದ 11 ಮನೆಗಳನ್ನು ನಿರ್ಮಾಣ ಮಾಡಲು ಅವಶ್ಯವಿರುವ ರೂ.54.84ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2 | ಆಲೂರು ಟೌನ್‌ನಲ್ಲಿ ಡಾ: ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ನಿವೇಶನ ಹಸ್ತಾಂತರಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಮಹಾ/ಯೋವಿ(4) ನಿವೇಶನ-7/2010-11 ದಿನಾಂಕ: 05-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಆಲೂರು ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಆಲೂರು ಟೌನ್‌ನಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಅಗತ್ಯವಿದ್ದ 100X 100 ವಿಸ್ತೀರ್ಣದ ನಿವೇಶನವನ್ನು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಆಲೂರು ಇವರಿಗೆ ವಹಿಸಲು ತೀರ್ಮಾನಿಸಲಾಗಿದ್ದು, ಅದರಂತೆ, ನಿವೇಶನ ಹಸ್ತಾಂತರಕ್ಕೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆಲೂರು ಇವರು ಮುಸಲಿ ಸಲ್ಲಿಸಿ ಜಿಲ್ಲಾ ಪಂಚಾಯಿತಿಯ ಅನುಮೋದನೆ ಕೋರಿರುತ್ತಾರೆ. | ಸಭೆಯಲ್ಲಿ ಈ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆಲೂರು ಇವರು ಕೋರಿರುವಂತೆ ಆಲೂರು ಟೌನ್‌ನಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಅಗತ್ಯವಿರುವ 100 X 100 ವಿಸ್ತೀರ್ಣದ ನಿವೇಶನವನ್ನು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, |

| | | | |
|---|---|---|---|
| | | | ಆಲೂರು ಇವರಿಗೆ ವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | ಕೃಷಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಸಕಲೇಶಪುರ ಕಛೇರಿ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8)245/09-10 ದಿನಾಂಕ: 09-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಕೃಷಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಸಕಲೇಶಪುರದ ಕಛೇರಿಗೆ ಶ್ರೀ ನಾಸಿರ್ ಬಿನ್ ಅಸ್ಮತ್ ಇವರ ಕಟ್ಟಡವನ್ನು ದಿನಾಂಕ: 27-11-2000ರಿಂದ ಬಾಡಿಗೆಗೆ ಪಡೆದಿದ್ದು, ಹಾಲಿ ಕಟ್ಟಡಕ್ಕೆ ಮಾಹೆಯಾನ ರೂ.2650/-ಗಳನ್ನು ಪಾವತಿಸುತ್ತಿದ್ದು, ಕಟ್ಟಡದ ಮಾಲೀಕರು ಬಾಡಿಗೆಯನ್ನು ಹೆಚ್ಚಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಹಾಸನರವರು ಮಾಹೆಯಾನ ಬಾಡಿಗೆ ರೂ.3200/-(ರೂಪಾಯಿ ಮೂರು ಸಾವಿರದ ಎರಡು ನೂರು ಮಾತ್ರ)ಗಳನ್ನು ನಮೂನೆ -10ರಲ್ಲಿ ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ಮರು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ಪ್ರಸ್ತಾವನೆಯ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಕೋರಿರುವಂತೆ ಸಕಲೇಶಪುರ ಟೌನ್‌ನಲ್ಲಿ ಶ್ರೀ ನಾಸಿರ್ ಬಿನ್ ಅಸ್ಮತ್ ಇವರ ಮಾಲೀಕತ್ವದ ಕಟ್ಟಡದಲ್ಲಿ ನಡೆಯುತ್ತಿರುವ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಕಛೇರಿ ಕಟ್ಟಡಕ್ಕೆ ಮಾಹೆಯಾನ ಬಾಡಿಗೆಯನ್ನು ರೂ.3200/-(ರೂಪಾಯಿ ಮೂರು ಸಾವಿರದ ಎರಡು ನೂರು ಮಾತ್ರ)ಗಳಂತೆ ಮರು ನಿಗದಿಪಡಿಸಿ ಪಾವತಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 4 | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೈರಾಪುರ, ಆಲೂರು ತಾ: ಈ ವಸತಿ ಶಾಲೆಗೆ ಹೆಚ್ಚುವರಿಯಾಗಿ ಪಡೆದಿರುವ ಬಾಡಿಗೆ ಕಟ್ಟಡಕ್ಕೆ ಮಾಹೆಯಾನ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8)257/09-10 ದಿನಾಂಕ: 09-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದಡಿ ಹೊಸದಾಗಿ ಮಂಜೂರಾಗಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೈರಾಪುರ ಆಲೂರು ತಾ: ಇದನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದು, 2009-10ನೇ ಸಾಲಿನಲ್ಲಿ 50 ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಒಟ್ಟಾರೆ ಸದರಿ ಶಾಲೆಯಲ್ಲಿ 150 ಮಕ್ಕಳು 2009-10ನೇ ಸಾಲಿಗೆ ಪ್ರವೇಶ ಹೊಂದಿದ್ದು, ಈ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಕಟ್ಟಡವನ್ನು ಹಾಲಿ ನಡೆಸುತ್ತಿರುವ ಕಟ್ಟಡದ ಮೇಲ್ಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡವನ್ನು ಸರ್ಕಾರ ನಿಗದಿಪಡಿಸುವ ಬಾಡಿಗೆಯನ್ನು ಪಡೆಯುವ ಷರತ್ತಿನಂತೆ ಸೂಕ್ತ ಮುಚ್ಚಳಿಕೆ ಪತ್ರವನ್ನು ಕಟ್ಟಡದ ಮಾಲೀಕರಾದ ಶ್ರೀಮತಿ ಸರಸ್ವತಿ ಕೋಂ ಎಸ್.ದೇವರಾಜು, ಬೈರಾಪುರ ಇವರಿಂದ ಬರೆಸಿಕೊಂಡು ದಿನಾಂಕ: 01-07-2009ರಂದು ಇಲಾಖೆಯ ವಶಕ್ಕೆ ಪಡೆದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ನಡೆಸಲಾಗುತ್ತಿದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ರೂ.5900/-(ರೂಪಾಯಿ ಐದು ಸಾವಿರದ ಒಂಬೈನೂರು ಮಾತ್ರ)ಗಳಂತೆ ಬಾಡಿಗೆ ಪಾವತಿಸಲು | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ, ಶ್ರೀಮತಿ ಸರಸ್ವತಿ ಕೋಂ ಎಸ್.ದೇವರಾಜು, ಬೈರಾಪುರ ಇವರ ಮಾಲೀಕತ್ವದ ಕಟ್ಟಡದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಮಾಹೆಯಾನ ರೂ.5900/- (ರೂಪಾಯಿ ಐದು ಸಾವಿರದ ಒಂಬೈನೂರು ಮಾತ್ರ) ಗಳಂತೆ ಬಾಡಿಗೆಯನ್ನು ದಿನಾಂಕ: 01-07-2009ರಿಂದ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| | | ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಕಟ್ಟಡದ ಮಾಲೀಕರಿಗೆ ದಿನಾಂಕ: 01-07-2009ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | |
| 5 | ಮೆಟ್ರಿಕ್ ನಂತರದ ಬಾಲಕರಿಯರ ವಿದ್ಯಾರ್ಥಿ ನಿಲಯ(ಹೆಚ್ಚುವರಿ), ಹಾಸನ ಟೌನ್, ಈ ನಿಲಯವನ್ನು ಬೇರೆ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ. | ಹಾಸನ ನಗರದಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯವನ್ನು 2008-09ನೇ ಸಾಲಿನಲ್ಲಿ 50 ಸಂಖ್ಯಾಬಲಕ್ಕೆ ಅನುಗುಣವಾಗಿ ಹೌಸಿಂಗ್ ಬೋರ್ಡ್‌ನ ಎನ್.ಡಿ.ಆರ್.ಕೆ ಕಾಲೇಜು ಹತ್ತಿರವಿರುವ ಶ್ರೀಮತಿ ಗಂಗಮ್ಮ ಕೋಂ ಸೋಮಶೇಖರಪ್ಪ, ಉದಯಗಿರಿ ಬಡಾವಣೆ, ಹಾಸನ ಇವರ ಒಡೆತನದಲ್ಲಿರುವ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆದು ನಡೆಸಲಾಗುತ್ತಿದ್ದು, 2009-10ನೇ ಸಾಲಿನಲ್ಲಿ ಶೇ.50ರಷ್ಟು ಸಂಖ್ಯಾ ಬಲ ಹೆಚ್ಚಿಸಿಕೊಂಡ ನಂತರ ಈ ನಿಲಯದ ಒಟ್ಟು ಸಂಖ್ಯಾಬಲ 80 ಆಗಿದೆ. ಹಾಲಿ ಇರುವ ಕಟ್ಟಡದಲ್ಲಿ 80 ವಿದ್ಯಾರ್ಥಿನಿಯರಿಗೆ ಸಮರ್ಪಕವಾಗಿ ನೀರಿನ ಸೌಲಭ್ಯ ಹಾಗೂ ವಿದ್ಯಾರ್ಥಿಗಳ ವಾಸಕ್ಕೆ ಸೂಕ್ತ ಸ್ಥಳಾವಕಾಶ ಕೊರತೆಯಾಗುತ್ತಿರುವ ಕಾರಣ ಅಗತ್ಯವಾಗಿ ಬೇಕಾಗಿರುವ ನೀರಿನ ಸೌಕರ್ಯ ಹಾಗೂ ಮೂಲಭೂತ ಸೌಕರ್ಯಗಳನ್ನೊಳಗೊಂಡ ಬಾಡಿಗೆ ಕಟ್ಟಡದ ಅವಶ್ಯಕತೆ ಇದ್ದು, ಕುವೆಂಪು ನಗರದ ಎಂ.ಐ.ಜಿ 10/ಸಿ, 16ನೇ ಅಡ್ಡರಸ್ತೆ, 2ನೇ ಹಂತದಲ್ಲಿ ಶ್ರೀಮತಿ ಜಯಮ್ಮ ಕೋಂ ಹೆಚ್.ಡಿ.ಪುಟ್ಟಯ್ಯ ಇವರ ಕಟ್ಟಡವು ಸೂಕ್ತ ಮೂಲಭೂತ ಸೌಕರ್ಯವನ್ನು ಹೊಂದಿದ್ದು, 80 ವಿದ್ಯಾರ್ಥಿನಿಯರು ವಾಸಿಸಲು 22 ಕೊಠಡಿಗಳ ಹಾಗೂ ಎರಡು ಮಲಗುವ ಕೊಠಡಿಗಳನ್ನೊಳಗೊಂಡ 2 ಮನೆಗಳಿದ್ದು, ಕಟ್ಟಡವು ಸೂಕ್ತವಾಗಿದ್ದು, ಕಟ್ಟಡದ ಮಾಲೀಕರು ಸರ್ಕಾರ ನಿಗದಿಪಡಿಸುವ ಬಾಡಿಗೆಯನ್ನು ಪಡೆಯಲು ಒಪ್ಪಿರುತ್ತಾರೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ-494 ಬಿಎಂಎಸ್-2009 ದಿನಾಂಕ: 31-12-2009ರಲ್ಲಿ ಮಾಹೆಯಾನ ಬಾಡಿಗೆ ರೂ.10000/-ಕ್ಕಿಂತ ಹೆಚ್ಚು ಇದ್ದಲ್ಲಿ, ಕಡ್ಡಾಯವಾಗಿ ಪೂರ್ಣ ವಿವರಗಳನ್ನು ಬಾಡಿಗೆ ನಿಗದಿ ಪತ್ರದೊಂದಿಗೆ, ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆದ ನಂತರವೇ ಆ ಬಾಡಿಗೆ ಕಟ್ಟಡವನ್ನು ಇಲಾಖೆ ವಶಕ್ಕೆ ಪಡೆಯಬೇಕು ಎಂದು ತಿಳಿಸಲಾಗಿದೆ. ಈ ಪ್ರಕರಣದಲ್ಲಿ ಬಾಡಿಗೆ ನಿಗದಿಪಡಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಪೂರ್ವಾನುಮತಿ ಪಡೆಯಲು ವಿಳಂಬವಾಗುವುದರಿಂದ, ಮಾಲೀಕರು ಕಟ್ಟಡವನ್ನು ಬೇರೆಯವರಿಗೆ ನೀಡುವ ಸಾಧ್ಯತೆ ಇದ್ದು, ಇಲಾಖೆಯ ವಿದ್ಯಾರ್ಥಿನಿಲಯ ನಡೆಸಲು ಮೂಲಭೂತ ಸೌಕರ್ಯಗಳಿರುವ ಸೂಕ್ತ ಕಟ್ಟಡಗಳು ಲಭ್ಯವಾಗದೇ ಇರುವ ಸಂಭವ ಇರುತ್ತದೆ. ಆದ್ದರಿಂದ, ಈ ಕುರಿತು ಸೂಕ್ತ ನಿರ್ಣಯಕ್ಕೆ ಟಿಪ್ಪಣಿ ಸಲ್ಲಿಸಲಾಗಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ನಗರದಲ್ಲಿ ಮೂಲಭೂತ ಸೌಕರ್ಯವನ್ನೊಳಗೊಂಡ ಬಾಡಿಗೆ ಕಟ್ಟಡಗಳು ದೊರಕುವುದು ವಾಸ್ತವವಾಗಿ ಕಷ್ಟಕರವಾಗಿರುತ್ತದೆ. ನಗರ ಪ್ರದೇಶದಲ್ಲಿ ಕಟ್ಟಡ ಮಾಲೀಕರು ಕಟ್ಟಡಗಳಿಗೆ ಮುಂಗಡವಿಲ್ಲದೆ ಬಾಡಿಗೆಗೆ ಕೊಡುವುದಿಲ್ಲವಾದ್ದರಿಂದ, ಆದಾಗ್ಯೂ ಮಾಲೀಕರ ಮನವೊಲಿಸಿ ಬಾಡಿಗೆಗೆ ತೆಗೆದುಕೊಂಡ ಇಂತಹ ಕಟ್ಟಡಗಳಿಗೆ ಸರ್ಕಾರದ ಅನುಮೋದನೆ ಆಗುವವರೆಗೆ ಮಾಲೀಕರು ಬಾಡಿಗೆ ರಹಿತವಾಗಿ ಕಟ್ಟಡವನ್ನು ಹಾಗೆ ಬಿಡಲು ಒಪ್ಪುವುದಿಲ್ಲವಾದ್ದರಿಂದ, ಸರ್ಕಾರದ ಸುತ್ತೋಲೆ ಸಂ: ಸಕಇ 494 ಬಿಎಂಎಸ್ 2009 ದಿನಾಂಕ 31-12-2009ರಲ್ಲಿ ಮಾಹೆಯಾನ ಬಾಡಿಗೆ ರೂ.10,000.00ಕ್ಕಿಂತ ಹೆಚ್ಚು ಇದ್ದಲ್ಲಿ ಸುತ್ತೋಲೆಯ ನಿರ್ದೇಶನದ ಪ್ರಕಾರ, ಬಾಡಿಗೆ ಕಟ್ಟಡದ ವಿವರಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದಿಂದ ಅನುಮೋದನೆ ಪಡೆದ ಬಳಿಕ ಬಾಡಿಗೆ ಕಟ್ಟಡವನ್ನು ಇಲಾಖಾ ವಶಕ್ಕೆ ಪಡೆಯುವುದು ಎಂದಿದ್ದು, ಈ ಪ್ರಕರಣದಲ್ಲಿ ಮಾಲೀಕರು ಸರ್ಕಾರದಿಂದ ಅನುಮತಿ ಬರುವುದು ತಡವಾಗುವ ಕಾರಣ, ಒಪ್ಪುತ್ತಿಲ್ಲವಾದ್ದರಿಂದ ಹಾಸನ ಟೌನ್, ಕುವೆಂಪು ನಗರದ ಎಂ.ಐ.ಜಿ -10/ಸಿ , 16ನೇ ಅಡ್ಡರಸ್ತೆ, 2ನೇ ಹಂತದಲ್ಲಿ ಶ್ರೀಮತಿ ಜಯಮ್ಮ ಕೋಂ ಪುಟ್ಟಯ್ಯ ಇವರ ಒಡೆತನದಲ್ಲಿರುವ ಕಟ್ಟಡವನ್ನು |

| | | |
|---|---|---|
| | | ಸಮಿತಿಯು ಖುದ್ದು ಪರಿಶೀಲಿಸಿ, 80 ವಿದ್ಯಾರ್ಥಿನಿಯರು ವಾಸಿಸಲು 22 ಕೊಠಡಿಗಳು ಹಾಗೂ ಮಲಗುವ ಕೊಠಡಿಗಳಿರುವ 2 ಮನೆಗಳಿದ್ದು, ಇಲ್ಲಿ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನೊಳಗೊಂಡಿದ್ದು, ವಿದ್ಯಾರ್ಥಿಗಳ ವಾಸಕ್ಕೆ ಯೋಗ್ಯವಾಗಿರುವುದರಿಂದ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಕಟ್ಟಡದ ಮಾಲೀಕರೊಂದಿಗೆ ಕರಾರು ಮಾಡಿಕೊಂಡು ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ಬಾಡಿಗೆಗೆ ಮಾಲೀಕರು ಒಪ್ಪುವ ಷರತ್ತಿನ ಮೇರೆಗೆ, ಕಟ್ಟಡವನ್ನು ಇಲಾಖೆಯ ವಶಕ್ಕೆ ಪಡೆದು ವಿದ್ಯಾರ್ಥಿನಿಲಯ ನಡೆಸಲು . ವಶಕ್ಕೆ ತೆಗೆದುಕೊಳ್ಳ ಬಹುದೆಂದು ತೀರ್ಮಾನಿಸಿ, ಲೋಕೋಪಯೋಗಿ ಇಲಾಖೆಯಿಂದ ನಿಗದಿಪಡಿಸುವ ಬಾಡಿಗೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ರೀತಿ ತೆಗೆದು ಕೊಂಡ ಕ್ರಮವನ್ನು ಅನುಸಮರ್ಥಿಸಲು ಸಹ ಸರ್ಕಾರಕ್ಕೆ ವರದಿ ಸಲ್ಲಿಸಬಹುದೆಂದು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಲಾಯಿತು. |
| ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಸಕಲೇಶಪುರ ಟೌನ್, ಈ ನಿಲಯದ ಹೆಚ್ಚುವರಿ ಕೊಠಡಿಗಳಿಗೆ ಬಾಡಿಗೆ ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು. | ಸರ್ಕಾರದ ಆದೇಶ ಸಂಖ್ಯೆ ಸಕಇ 167 ಬಿಎಂಎಸ್ 2006-07 ದಿನಾಂಕ: 13-09-2006ರಲ್ಲಿ ರಾಜ್ಯವಲಯ ಕಾರ್ಯಕ್ರಮದಡಿ ಮಂಜೂರಾಗಿ ಸಕಲೇಶಪುರ ಟೌನ್‌ನಲ್ಲಿ 65 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಹಾಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2009-10ನೇ ಸಾಲಿನಲ್ಲಿ ಈ ನಿಲಯಕ್ಕೆ ಶೇ.50ರಷ್ಟು ಸಂಖ್ಯಾಬಲ ಹೆಚ್ಚಿಸಿಕೊಂಡ ನಂತರ 30 ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಹಾಲಿ ಇರುವ ನಿಲಯದಲ್ಲಿ ಹೆಚ್ಚುವರಿ ವಿದ್ಯಾರ್ಥಿ ಗಳಿಗೆ ಸಾಕಷ್ಟು ಸ್ಥಳಾವಕಾಶವಿಲ್ಲದ ಕಾರಣ, ಸದರಿ ವಿದ್ಯಾರ್ಥಿನಿಲಯಕ್ಕೆ ಹೊಂದಿಕೊಂಡಂತೆ ಅಗತ್ಯ ಮೂಲಭೂತ ಸೌಕರ್ಯವನ್ನು ಹೊಂದಿರುವ ಶ್ರೀ ಹೆಚ್.ಬಿ. ಯಜಮಾನ್‌ಗೌಡ ಬಿನ್ ಭೈರೇಗೌಡ, ಸಕಲೇಶಪುರ ಇವರ ಒಡೆತನದಲ್ಲಿರುವ ಹೆಚ್ಚುವರಿ ಕೊಠಡಿಗಳನ್ನು ಸರ್ಕಾರ ನಿಗದಿಪಡಿಸುವ ಬಾಡಿಗೆಯನ್ನು ಪಡೆಯುವ ಷರತ್ತಿನಂತೆ ಸೂಕ್ತ ಕರಾರು ಪತ್ರವನ್ನು ಬರೆಯಿಸಿಕೊಂಡು ದಿನಾಂಕ: 1- | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಸಕಲೇಶಪುರ ಟೌನ್‌ನಲ್ಲಿ ಶ್ರೀ ಹೆಚ್.ಬಿ.ಯಜಮಾನ್‌ಗೌಡ ಬಿನ್ ಭೈರೇಗೌಡ ಇವರ ಮಾಲೀಕತ್ವದ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಹೆಚ್ಚುವರಿ ಕೊಠಡಿಗಳಿಗೆ ಮಾಹೆಯಾನ ರೂ.7000/-(ರೂಪಾಯಿ ಏಳು ಸಾವಿರ |

| | | | |
|---|---|---|---|
| | | 11-2008ರಿಂದ ಅನ್ವಯಿಸುವಂತೆ ಬಾಡಿಗೆಗೆ ಪಡೆದು ನಡೆಸಲಾಗುತ್ತಿದೆ. ಸದರಿ ಕಟ್ಟಡದಲ್ಲಿ ಹೆಚ್ಚುವರಿ ಕೊಠಡಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ರವರು ಕಟ್ಟಡದ ಒಟ್ಟು ವಿಸ್ತೀರ್ಣ 2226.88 ಚದರ ಅಡಿ ಇದ್ದು, ಇದಕ್ಕೆ ಮಾಹೆಯಾನ ರೂ.7000/-ರಂತೆ ಬಾಡಿಗೆ ನಿಗದಿಪಡಿಸಿ ಕಳುಹಿಸಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 1-11-2008ರಿಂದ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ಕೋರಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br>ಮುಂದುವರೆದು, ಬಾಡಿಗೆ ಕಟ್ಟಡಗಳಿಗೆ ಬಾಡಿಗೆ ನಿಗದಿಗೆ ಕುರಿತಂತೆ ರಚಿಸಲಾಗಿರುವ ಉಪ ಸಮಿತಿಯಿಂದ ಕಟ್ಟಡಗಳಲ್ಲಿನ ಮೂಲಭೂತ ಸೌಕರ್ಯಗಳ ಕುರಿತಂತೆ ದಿನಾಂಕ: 19-12-2009ರಂದು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಕಲೇಶಪುರ ಟೌನ್ ಈ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ ಸಮಯದಲ್ಲಿ ಸದರಿ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿ ಸ್ಥಳ ತನಿಖೆ ಮಾಡಿರುತ್ತಾರೆ. ಅದರಂತೆ, ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸಕಲೇಶಪುರ ಟೌನ್ ಈ ವಿದ್ಯಾರ್ಥಿನಿಲಯದ ಹೆಚ್ಚುವರಿ ಕೊಠಡಿಗಳಿಗೆ ಬಾಡಿಗೆಯನ್ನು ನಿಗದಿಪಡಿಸಲು ಜಿಲ್ಲಾ ಪಂಚಾಯಿತಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಟಿಪ್ಪಣಿ ಮಂಡಿಸಿದೆ. | ಮಾತ್ರ)ಗಳಂತೆ ಬಾಡಿಗೆಯನ್ನು ದಿನಾಂಕ: 01-11-2008ರಿಂದ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | ಚನ್ನರಾಯಪಟ್ಟಣ ತಾ ಶ್ರವಣಬೆಳಗೊಳ ಗ್ರಾಮದ ಮೆ.ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(8)347/ 08-09 ದಿನಾಂಕ: 08-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿನಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳ ಗ್ರಾಮಕ್ಕೆ ಮಂಜೂರಾದ 75 ಸಂಖ್ಯಾಬಲದ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಶ್ರೀಮತಿ ಜಯಮ್ಮ ಕೋಂ ರಂಗಪ್ಪ ಹಾಗೂ ಶ್ರೀ ಎಸ್.ಆರ್. ಶೇಖರ್ ಬಿನ್ ಎಸ್.ಎನ್.ರಂಗಪ್ಪ ರವರ ಮಾಲೀಕತ್ವದ ಕಟ್ಟಡದಲ್ಲಿ ಪ್ರಾರಂಭಿಸಲಾಗಿದ್ದು, ಸದರಿ ಕಟ್ಟಡಕ್ಕೆ ಮಾಹೆಯಾನ ರೂ.5200/-ಗಳನ್ನು ನಿಗದಿಪಡಿಸಿ ಜಿಲ್ಲಾ ಪಂಚಾಯಿತಿಯಿಂದ ಆದೇಶಿಸಲಾಗಿರುತ್ತದೆ. ಸದರಿ ಕಟ್ಟಡದ ಮಾಲೀಕರುಗಳು ಬಾಡಿಗೆಯನ್ನು ಹೆಚ್ಚಿಸುವಂತೆ, ಇಲ್ಲವಾದಲ್ಲಿ ಕಟ್ಟಡವನ್ನು ತೆರವುಗೊಳಿಸುವಂತೆ ಒತ್ತಡ ತರುತ್ತಿದ್ದರಿಂದ, ಅದೇ ಗ್ರಾಮದಲ್ಲಿರುವ ಶ್ರೀ ಮಂಜುನಾಥ ಎಜುಕೇಷನ್ ವಿದ್ಯಾ ಸಂಸ್ಥೆಗೆ ಸೇರಿದ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಜಿಲ್ಲಾ ಪಂಚಾಯಿತಿ ನಿಗದಿಪಡಿಸುವ ಬಾಡಿಗೆಯನ್ನು ಪಡೆಯಲು ಒಪ್ಪಿ ಕರಾರು ಪತ್ರವನ್ನು ನೀಡಿದ್ದರಿಂದ, ಶ್ರವಣಬೆಳಗೊಳ ಬಾಲಕಿಯರ ವಿದ್ಯಾರ್ಥಿನಿಲಯವನ್ನು ದಿನಾಂಕ: 12-06-2009ರಿಂದ ಸ್ಥಳಾಂತರಿಸಿ ನಡೆಸಲಾಗುತ್ತಿದ್ದು, ಸದರಿ ಕಟ್ಟಡವು 6 ಕೊಠಡಿ, 1 ಅಡುಗೆ ಕೋಣೆ, 2 ಸ್ನಾನದ ಗೃಹಗಳು, 2 ಶೌಚಾಲಯಗಳು, 1 ದಾಸ್ತಾನು ಕೊಠಡಿ, ಗ್ರಾಮ ಪಂಚಾಯಿತಿ ಹಾಗೂ ಕೊಳವೆ ಬಾವಿ ನೀರು ಸಂಪರ್ಕ, ವಿದ್ಯುತ್ ಸೌಲಭ್ಯ ಹಾಗೂ ಉತ್ತಮ ಗಾಳಿ | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಹಾಸನ ಇವರು ಕೋರಿರುವಂತೆ, ಚನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳ ಗ್ರಾಮದಲ್ಲಿ ಶ್ರೀ ಮಂಜನಾಥ ಎಜುಕೇಷನ್ ವಿದ್ಯಾ ಸಂಸ್ಥೆಯ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.12700/- (ರೂಪಾಯಿ ಹನ್ನೆರಡು ಸಾವಿರದ ಏಳು ನೂರು ಮಾತ್ರ) ಗಳಂತೆ ಬಾಡಿಗೆಯನ್ನು ಶ್ರೀ ಸಿ.ಎ. ನಟೇಶ ಬಿನ್ ಲಕ್ಕೇ ಗೌಡ ರವರ ಹೆಸರಿಗೆ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| | | ಬೆಳಕಿನ ಸೌಲಭ್ಯವನ್ನು ಹೊಂದಿದ್ದು, ವಿದ್ಯಾರ್ಥಿನಿಲಯಕ್ಕೆ ಸೂಕ್ತವಾಗಿರುತ್ತದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನರವರು ಮಾಹೆಯಾನ ಬಾಡಿಗೆ ರೂ.12700/-ಗಳನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿದ್ದು, ಶ್ರೀ ಮಂಜುನಾಥ ಎಜುಕೇಷನ್ ವಿದ್ಯಾ ಸಂಸ್ಥೆಯ ಸದಸ್ಯರಾದ ಶ್ರೀ ಸಿ.ಎಲ್.ನಟೇಶ ಬಿನ್ ಲಕ್ಕೇಗೌಡ ರವರ ಹೆಸರಿಗೆ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಆಡಳಿತಾತ್ಮಕ ಅನುಮೋದನೆ ನೀಡುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. | |
| 8 | ಸಕಲೇಶಪುರ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ ಆಸಿ(8) /2008-09 ದಿನಾಂಕ: 8-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿಗೆ ಸಕಲೇಶಪುರ ಟೌನ್‌ಗೆ ಮಂಜೂರಾದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ತಾಲ್ಲೂಕು ಪಂಚಾಯಿತಿಗೆ ಸೇರಿದ ಹಳೆಯ ಪ್ರವಾಸಿ ಮಂದಿರದ ಕಟ್ಟಡದಲ್ಲಿ ದಿನಾಂಕ: 01-09-2007ರಿಂದ ಪ್ರಾರಂಭಿಸಲಾಗಿರುತ್ತದೆ. ಸದರಿ ಕಟ್ಟಡವು 15 ವಸತಿ ಕೊಠಡಿ, 2 ಅಡುಗೆ ಕೋಣೆ, 4 ಸ್ನಾನದ ಗೃಹ, 4 ಶೌಚಾಲಯ, 1 ಕಛೇರಿ ಕೊಠಡಿ, 2 ದಾಸ್ತಾನು ಕೊಠಡಿ, 2 ಊಟದ ಕೊಠಡಿ, ಪುರಸಭಾ ನೀರಿನ ಸೌಕರ್ಯ ಹಾಗೂ ಉತ್ತಮ ಗಾಳಿ ಬೆಳಕಿನ ವ್ಯವಸ್ಥೆ ಹೊಂದಿದ್ದು, ನಿಲಯಕ್ಕೆ ಬೇಕಾಗುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ರವರು ಮಾಹೆಯಾನ ಬಾಡಿಗೆ ರೂ.14,800/-ಗಳನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ದಿನಾಂಕ: 22-05-2009ರಂದು ನಡೆದ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸ್ಥಾಯಿ ಸಮಿತಿಯಲ್ಲಿ ಸದರಿ ಕಟ್ಟಡವು ತಾಲ್ಲೂಕು ಪಂಚಾಯಿತಿಗೆ ಸೇರಿದ ಸರ್ಕಾರಿ ಕಟ್ಟಡವಾಗಿರುವುದರಿಂದ, ಬಾಡಿಗೆ ನೀಡಲು ಅವಕಾಶವಿಲ್ಲದಿರುವುದಾಗಿ ತೀರ್ಮಾನಿಸಲಾಗಿರುತ್ತದೆ.<br><br>ದಿನಾಂಕ: 31-12-2009ರಂದು ನಡೆದ ಸಕಲೇಶಪುರ ತಾಲ್ಲೂಕು ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿದ್ಯಾರ್ಥಿನಿಲಯದ ನಡೆಸಲು ನೀಡಲಾಗಿರುವ ತಾಲ್ಲೂಕು ಪಂಚಾಯಿತಿಗೆ ಸೇರಿದ ಪ್ರವಾಸಿ ಮಂದಿರದ ಕಟ್ಟಡಕ್ಕೆ ಬಾಡಿಗೆ ಪಾವತಿಸುವಂತೆ ಇಲ್ಲದೆ ಇದ್ದಲ್ಲಿ, ಕಟ್ಟಡವನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಕಲೇಶಪುರರವರಿಗೆ ಸೂಚಿಸಿ ತೀರ್ಮಾನಿಸಲಾಗಿರುತ್ತದೆ. ಸದರಿ ವಿಷಯವನ್ನು ದಿನಾಂಕ: 18-02-2010ರಂದು ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪಂಚಾಯತ್ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸಕಲೇಶಪುರ ಟೌನ್‌ನಲ್ಲಿ ತಾಲ್ಲೂಕು ಪಂಚಾಯಿತಿಗೆ ಸೇರಿದ ಹಳೆಯ ಪ್ರವಾಸಿ ಮಂದಿರದಲ್ಲಿ ನಡೆಯುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಕಟ್ಟಡವು ಸರ್ಕಾರಿ ಕಟ್ಟಡವಾಗಿರುವುದರಿಂದ, ಜಿಲ್ಲಾ ಪಂಚಾಯಿತಿಯಿಂದ ಬಾಡಿಗೆಯನ್ನು ನಿಗದಿಪಡಿಸಲು ಅವಕಾಶವಿರುವುದಿಲ್ಲ. ಆದರೆ, ಸದರಿ ಕಟ್ಟಡಕ್ಕೆ ಅವಶ್ಯಕವಾಗಿರುವ ದುರಸ್ಥಿಗಳನ್ನು ಕೈಗೊಳ್ಳಬಹುದಾಗಿರುವುದರಿಂದ, ಸಮಾಜ ಕಲ್ಯಾಣ ಇಲಾಖೆಯಡಿ ಕಟ್ಟಡ ದುರಸ್ಥಿಗೆ ನಿಗದಿಯಾಗಿರುವ ಅನುದಾನದಲ್ಲಿ ಪ್ರತಿ ವರ್ಷ ರೂ.1.00ಲಕ್ಷ (ರೂಪಾಯಿ ಒಂದು ಲಕ್ಷ ಮಾತ್ರ)ಗಳನ್ನು ಕಡ್ಡಾಯವಾಗಿ ತೆಗೆದಿರಿಸಲು ಸಭೆಯು ಸರ್ವಾನುಮತದಿಂದ, ತೀರ್ಮಾನಿಸಿತು. |

| | | | |
|---|---|---|---|
| | | ಸದಸ್ಯರುಗಳ ಗಮನಕ್ಕೆ ತರಲಾಗಿ ಈ ಬಗ್ಗೆ ಮುಂದಿನ ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿಯಲ್ಲಿ ಮಂಡಿಸುವಂತೆ ಸಮಿತಿಯ ಅಧ್ಯಕ್ಷರು/ ಸದಸ್ಯರುಗಳು ತಿಳಿಸಿರುತ್ತಾರೆ.<br>ದಿನಾಂಕ: 18-02-2010ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿ ತೀರ್ಮಾನದಂತೆ ಸಕಲೇಶಪುರ ತಾಲ್ಲೂಕು ಪಂಚಾಯಿತಿಗೆ ಸೇರಿದ ಪ್ರವಾಸಿ ಮಂದಿರದ ಹಳೆಯ ಕಟ್ಟಡದಲ್ಲಿ ನಡೆಸಲಾಗುತ್ತಿರುವ ಸಕಲೇಶಪುರ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡಕ್ಕೆ ದಿನಾಂಕ: 01-09-2007ರಿಂದ ಬಾಡಿಗೆಯನ್ನು ಪಾವತಿಸುವ ಸಲುವಾಗಿ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಮಂಡಿಸಿದೆ. | |
| 9 | ಹೊಳೆನರಸೀಪುರ ಟೌನ್ ಕಾಲೇಜು, ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಬಾಡಿಗೆ ನಿಗದಿ ಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ; ಜಿಪಂಹಾ/ಆ(8)188/2008-09 ದಿನಾಂಕ: 08-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹೊಳೆನರಸೀಪುರ ಟೌನ್‌ನಲ್ಲಿ ನಡೆಯುತ್ತಿರುವ 50 ಸಂಖ್ಯಾಬಲದ ಕಾಲೇಜು ಬಾಲಕರ ವಿದ್ಯಾರ್ಥಿನಿಲಯವನ್ನು ಟಿಎಪಿಸಿಎಂಎಸ್‌ಗೆ ಸೇರಿದ ಕಟ್ಟಡವನ್ನು ದಿನಾಂಕ: 03-08-2008ರಿಂದ ಬಾಡಿಗೆಗೆ ಪಡೆಯಲಾಗಿದ್ದು, ಸದರಿ ಕಟ್ಟಡಕ್ಕೆ ಮಾಹೆಯಾನ ರೂ.10500/-ಗಳ ಬಾಡಿಗೆಯನ್ನು ಪಾವತಿಸಲು ಜಿಲ್ಲಾ ಪಂಚಾಯಿತಿಯಿಂದ ಆದೇಶಿಸಲಾಗಿರುತ್ತದೆ.<br>ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ 50 ಸಂಖ್ಯಾಬಲದ ಕಾಲೇಜು ಬಾಲಕರ ವಿದ್ಯಾರ್ಥಿನಿಲಯವನ್ನು ಸಂಖ್ಯಾಬಲದ ಕೊರತೆಯಿಂದಾಗಿ ಆದೇಶ ಸಂ: ಸಕಇ 68 ಪಕವಿ 2008 ಬೆಂಗಳೂರು ದಿನಾಂಕ: 28-03-2008ರಲ್ಲಿ ಹೊಳೆನರಸೀಪುರ ಟೌನ್‌ಗೆ ಸ್ಥಳಾಂತರಿಸಿ ಸರ್ಕಾರದಿಂದ ಆದೇಶಿಸಲಾಗಿರುತ್ತದೆ. ಸದರಿ ಸ್ಥಳಾಂತರಗೊಂಡ ವಿದ್ಯಾರ್ಥಿ ನಿಲಯವನ್ನು ನಡೆಸಲು ಹಾಲಿ ಹೊಳೆನರಸೀಪುರ ಟೌನ್ ಕಾಲೇಜು ಬಾಲಕರ ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿರುವ ಟಿಎಪಿಸಿಎಂಎಸ್‌ಗೆ ಸೇರಿದ ಮೊದಲನೇ ಮಹಡಿಯನ್ನು ದಿನಾಂಕ: 01-08-2009ರಿಂದ ಬಾಡಿಗೆಗೆ ಪಡೆಯಲಾಗಿರುತ್ತದೆ.<br>ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರು ಸದರಿ ಕಟ್ಟಡಕ್ಕೆ ಮಾಹೆಯಾನ ಬಾಡಿಗೆ ರೂ.15000/-ಗಳಿಗೆ ( ಈ ಹಿಂದೆ ಬಾಡಿಗೆ ಅನುಮೋದನೆ ನೀಡಲಾಗಿರುವ ನೆಲ ಅಂತಸ್ತಿನ ಕಟ್ಟಡವು ಸೇರಿ) ನಮೂನೆ-10 ರಲ್ಲಿ ಶಿಫಾರಸ್ಸು ಮಾಡಿದ್ದು, ಸದರಿ ಬಾಡಿಗೆಯನ್ನು ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ ಟಿಎಪಿಸಿಎಂಎಸ್‌ಗೆ ಸೇರಿದ ನೆಲಮಹಡಿ ಮತ್ತು ಮೊದಲನೇ ಮಹಡಿಯಲ್ಲಿರುವ ಕಟ್ಟಡದಲ್ಲಿ ನಡೆಯುತ್ತಿರುವ ಹೊಳೆನರಸೀಪುರ ಟೌನ್ ಕಾಲೇಜು ಬಾಲಕರ ಹಾಗೂ ಹಳ್ಳಿಮೈಸೂರಿನಿಂದ ಸ್ಥಳಾಂತರಗೊಂಡ ಕಾಲೇಜು ಬಾಲಕರ ವಿದ್ಯಾರ್ಥಿನಿಲಯ ಕಟ್ಟಡಕ್ಕೆ ದಿನಾಂಕ: 01-08-2009ರಿಂದ ಮಾಹೆಯಾನ ರೂ.15000/-(ರೂಪಾಯಿ ಹದಿನೈದು ಸಾವಿರ ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| 10 | ಸಕಲೇಶಪುರದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡಕ್ಕೆ ಬಾಡಿಗೆ ನಿಗದಿ ಪಡಿಸಿರುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಸಕ/ ಮೊದೇವಶಾ/ಸಿಆರ್-21/2009-10 ದಿನಾಂಕ: 07-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2008-09ನೇ ಸಾಲಿಗೆ ಹೊಸದಾಗಿ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸಕಲೇಶಪುರಕ್ಕೆ ಶ್ರೀಮತಿ ಮಂಗಳ ಕೋಂ ರಾಜೇಗೌಡ, ಶ್ರೀಕಂಠನಗರ, ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾಲ್ಲೂಕು ಇವರಿಗೆ ಸೇರಿದ ಕಟ್ಟಡವನ್ನು ಬಾಡಿಗೆಗೆ ಪಡೆದು ದಿನಾಂಕ: 10-12-2008ರಿಂದ ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನರವರು ಮಾಹೆಯಾನ ರೂ.10500/-ರಂತೆ ಬಾಡಿಗೆಯನ್ನು ನಮೂನೆ-10ರಲ್ಲಿ ಶಿಫಾರಸ್ಸು ಮಾಡಿ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಬಾಡಿಗೆ ನಿಗದಿಪಡಿಸಿಕೊಡಬೇಕೆಂದು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಶ್ರೀಮತಿ ಮಂಗಳ ಕೋಂ ರಾಜೇಗೌಡ ಶ್ರೀಕಂಠನಗರ, ಶ್ರವಣಬೆಳಗೊಳ, ಚನ್ನರಾಯ ಪಟ್ಟಣ ತಾಲ್ಲೂಕು, ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಮಾಹೆಯಾನ ರೂ.10000/- (ರೂಪಾಯಿ ಹತ್ತು ಸಾವಿರ ಮಾತ್ರ ) ಗಳಂತೆ ಬಾಡಿಗೆಯನ್ನು ದಿನಾಂಕ: 10-12-2008ರಿಂದ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 11 | ಅರಸೀಕೆರೆ ಟೌನ್‌ನಲ್ಲಿ ಹೊಸದಾಗಿ ಪ್ರಾರಂಭಿಸಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಕಟ್ಟಡಕ್ಕೆ ಬಾಡಿಗೆ ನಿಗದಿ ಪಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ; ಜಿಸಕ/ ಮೊದೇವಶಾ/ ಸಿ.ಆರ್-21/2009-10 ದಿನಾಂಕ: 07-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2009-10ನೇ ಸಾಲಿಗೆ ಹೊಸದಾಗಿ ಮಂಜೂರಾಗಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಅರಸೀಕೆರೆ ಟೌನ್, ಬಿ.ಹೆಚ್.ರಸ್ತೆ, ಎನ್.ಹೆಚ್. 206ರಲ್ಲಿರುವ ಶ್ರೀ ಕೃಷ್ಣ ಕಲ್ಯಾಣ ಮಂಟಪದ ಮಾಲೀಕರಾದ ಶ್ರೀ ಹೆಚ್.ಆರ್.ಗೋಪಾಲರಾವ್‌ರವರ ಕಟ್ಟಡವನ್ನು ಬಾಡಿಗೆಗೆ ಪಡೆದು ನಡೆಸಲಾಗುತ್ತಿದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನರವರು ಮಾಹೆಯಾನ ರೂ.1.00ಲಕ್ಷಗಳ ಬಾಡಿಗೆಯನ್ನು ನಮೂನೆ-10ರಲ್ಲಿ ಶಿಫಾರಸ್ಸು ಮಾಡಿ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಬಾಡಿಗೆ ನಿಗದಿಪಡಿಸಿಕೊಡಬೇಕೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಅರಸೀಕೆರೆ ಟೌನ್‌ನಲ್ಲಿ ಶ್ರೀ ಕೃಷ್ಣ ಕಲ್ಯಾಣ ಮಂಟಪದ ಮಾಲೀಕರಾದ ಶ್ರೀ ಹೆಚ್.ಆರ್.ಗೋಪಾಲರಾವ್‌ರವರ ಕಟ್ಟಡದಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಮಾಹೆಯಾನ ರೂ.95000/-(ರೂಪಾಯಿ ತೊಂಬತ್ತೈದು ಸಾವಿರ ಮಾತ್ರ)ಗಳಂತೆ ಪ್ರತಿ ವರ್ಷ ವಸತಿ ಶಾಲೆಗೆ ಅವಶ್ಯಕವಿರುವ ಮೂಲಭೂತ ಸೌಲಭ್ಯಗಳನ್ನು ಕಟ್ಟಡದ ಮಾಲೀಕರೇ ಕಲ್ಪಿಸಿ ಕೊಡುವ ಷರತ್ತಿನೊಂದಿಗೆ ದಿನಾಂಕ: 15-08-2009ರಿಂದ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿ ಸಿತು. |
| 12 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಹಾಸನ ತಾಲ್ಲೂಕು, ಮೊಸಳೆಹೊಸಹಳ್ಳಿ ಗ್ರಾಮದಲ್ಲಿ 2007-08ನೇ ಸಾಲಿಗೆ ಮಂಜೂರಾದ ಮೆಟ್ರಿಕ್ ನಂತರದ | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. |

| | | | |
|---|---|---|---|
| | ಮೊಸಳೆಹೊಸಹಳ್ಳಿ, ಹಾಸನ ತಾಲ್ಲೂಕು ಈ ವಿದ್ಯಾರ್ಥಿನಿಲಯದ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ/ ಜಮೀನು ಪಡೆಯುವ ಬಗ್ಗೆ. | ಬಾಲಕರ ವಿದ್ಯಾರ್ಥಿ ನಿಲಯವನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದು, ಈ ನಿಲಯಕ್ಕೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳುಳ್ಳ ಸ್ವಂತ ಕಟ್ಟಡವನ್ನು ನಿರ್ಮಿಸಲು ನಿವೇಶನ ಅವಶ್ಯಕತೆ ಇದ್ದುದರಿಂದ, ಮೊಸಳೆಹೊಸಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಖಾ: ನಂ.239, 55 X 75 ಅಡಿಗಳ ನಿವೇಶನವನ್ನು ಇಲಾಖೆಗೆ ಉಚಿತವಾಗಿ ಮಂಜೂರು ಮಾಡಿ ಅನುಮೋದನೆಗಾಗಿ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಗೆ ಮಂಡಿಸಿದ್ದು, ದಿನಾಂಕ: 30-09-2009ರ ಹಾಸನ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ಪಡೆಯಲು ತೀರ್ಮಾನವಾಗಿರುವ ಅಂಶವನ್ನು ತಿಳಿಸಿ, ಸದರಿ ವಿದ್ಯಾರ್ಥಿನಿಲಯಕ್ಕೆ ಮಂಜೂರಾಗಿರುವ ನಿವೇಶನವನ್ನು ಜಿಲ್ಲಾ ಪಂಚಾಯಿತಿಯಿಂದ ಅನುಮೋದಿಸಲು ಕೋರಿ, ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br>ಆದುದರಿಂದ, ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಮೊಸಳೆಹೊಸಹಳ್ಳಿ, ಹಾಸನ ತಾಲ್ಲೂಕು ಇದಕ್ಕೆ ಮಂಜೂರಾಗಿರುವ 55 X 75 ಅಡಿ ಅಳತೆಯ ನಿವೇಶನವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಉಚಿತವಾಗಿ ಮಂಜೂರು ಮಾಡಿರುವುದನ್ನು ಅನುಮೋದಿಸಲು ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಟಿಪ್ಪಣಿ ಮಂಡಿಸಿದೆ. | ಜಿಲ್ಲಾ ಅಧಿಕಾರಿ, ಹಿಂದುಳಿದವ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಮೊಸಳೆಹೊಸಹಳ್ಳಿ, ಹಾಸನ ತಾಲ್ಲೂಕು ಇದಕ್ಕೆ ಮಂಜೂರಾಗಿರುವ 55 X 75 ಅಡಿ ಅಳತೆಯ ನಿವೇಶನವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಉಚಿತವಾಗಿ ಮಂಜೂರು ಮಾಡಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

(ಎ.ಇ.ಚಂದ್ರಶೇಖರ್ ಉ: ಅಣತಿ ಶೇಖರಣ್ಣ)
ಅಧ್ಯಕ್ಷರು
ಸಾಮಾನ್ಯ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯಿತಿ, ಹಾಸನ.